ಇಂದು ದಿಃ**14-07-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಸಿ ಬಿ ಆರ್ ವಕೀಲರಿಂದ 10 ನೇ ಪ್ರತಿವಾದಿಗಳ ಪರಃ**

ನನ್ನ ಸಾಕ್ಷಿ ಪ್ರಮಾಣ ಪತ್ರದ ಅಂಶಗಳ ಮಾಹಿತಿ ಇದೆ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ನಾನು , ವಾದಿ ಮತ್ತು ಪ್ರಾಸಾ 2 ಸಂಬಂಧಿಕರು ಎಂದರೆ ಸರಿ . ದಾವಾ ಆಸ್ತಿ ಈಗ 10 ನೇ ಪ್ರತಿವಾದಿಯ ಹೆಸರಿಗೆ ಇದೆ ಎಂದರೆ ಸರಿ . 10 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ ಸಾಕ್ಷಿ 1 ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದಾರೆಂದು ಎಂದು ಹೇಳುತ್ತಾರೆ. 10 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ರಿಂದ 9 ನೇ ಪ್ರತಿವಾದಿಯರು ಈ ದಾವೆಯಲ್ಲಿ ಗೈರು ಹಾಜರಿದ್ದಾರೆಂದರೆ ಸರಿ . ದಾವೆ ದಾಖಲು ಮಾಡುವ ಪೂರ್ವದಲ್ಲಿ ದಾವಾ ಆಸ್ತಿ 10 ನೇ ಪ್ರತಿವಾದಿಯ ಹೆಸರಿಗೆ ಇತ್ತು ಎಂದರೆ ಸರಿಯಲ್ಲ , ಸಾಕ್ಷಿ 1 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ಹೆಂಡತಿ ನಮ್ಮೂರಿನವರು ಇರುತ್ತಾರೆ, ಆ ಕಾರಣದಿಂದ 1 ನೇ ಪ್ರತಿವಾದಿಯ ಪರಿಚಯ . 1 ನೇ ಪ್ರತಿವಾದಿ ನಮ್ಮೂರಿನವನು ಇರುವುದಿಲ್ಲ . ಆತನ ಹೆಂಡತಿ ನಮ್ಮೂರಿನವಳು ಇರುತ್ತಾರೆ. 2015 ಮಾರ್ಚ ತಿಂಗಳಿನಲ್ಲಿ ದಾವಾ ಆಸ್ತಿಯ ಕುರಿತು ಪಂಚಾಯಿ ಆಯಿತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಕುರಿತು ಕ್ರಯದ ಕರಾರು ಪತ್ರ ಆಯಿತು ಮತ್ತು ನಾನು ಸಾಕ್ಷಿದಾರ ಎಂದು ಸಹಿ ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಪರಿಚಯ ಇರುವ ಕಾರಣ ನಾನು , ವಾದಿ ಮತ್ತು ಪ್ರಾಸ - 2 ಶಾಮೀಲಾಗಿ 10 ನೇ ಪ್ರತಿವಾದಿಯಿಂದ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಕ್ರಯದ ಕರಾರು ಪತ್ರ ಸೃಷ್ಟಿ ಮಾಡಿಕೊಂಡಿದ್ದೇವೆಂದರೆ ಸರಿಯಲ್ಲ. ದಾವಾ ಆಸ್ತಿಯ ಕುರಿತು

ಯಾವುದೇ ಖರೀದಿ ಮಾತುಕತೆ ಆಗಿಲ್ಲ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿಗೂ, ದಿನಾಂಕಃ 01-04-2015 ರ ಕ್ರಯದ ಕರಾರು ಪತ್ರಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.